ಇ) 2002-03ರ ಸಾಲಿನಲ್ಲಿ ಗುಂಪುಗಳ ಬಲವರ್ಧನೆಗಾಗಿ ಗುಂಪಿನ ಸದಸ್ಯರುಗಳಿಗೆ ಆದಾಯೋತ್ಪನ್ನ ಚಟುವಟಿಕೆ, ಸಾಲ ನಿರ್ವಹಣೆ, ವ್ಯಾಪರ ಅವಕಾಶಗಳು ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 13160 ಗುಂಪುಗಳಿಗೆ ತಲಾ 5000 ರೂ. ನಂತೆ ಸುತ್ತುನಿಧಿ ನೀಡಲಾಗುವುದು. ಗುಂಪುಗಳ ಆದಾಯೋತ್ಪನ್ನ ಚಟುವಟಿಕೆಗಳಿಗೆ ಬ್ಯಾಂಕುಗಳಿಂದ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

2002-03ರ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಗಾಗಿ 1242.50 ಲಕ್ಷ ರೂ.ಗಳ ಆಯವ್ಯಯವನ್ನು ನಿಗದಿಪಡಿಸಲಾಗಿದೆ.

ಎ.ಪಿ.ಎಂ.ಸಿ. ಯಲ್ಲಿನ ಮೂಲಭೂತ ಸೌಕರ್ಯಗಳು

155(248) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಬಂಡೀಪಾಳ್ಯದ ಎ.ಪಿ.ಎಂ.ಸಿ. ಯಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳ ವಿವರ ನೀಡುವುದು;

ಆ) ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಇಲ್ಲಿಗೆ ವ್ಯಾಪಾರಸ್ಥರು ಮಳಿಗೆ ಪಡೆದಿರುವವರು ವ್ಯಾಪಾರಕ್ಕೆ ಬರಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇಲ್ಲಿ ಪೂರ್ಣವಾಗಿ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಯಾವ ಯಾವ ಕ್ರಮ ಕೈಗೊಂಡಿದೆ; ಎಂದು ಪೂರ್ಣಗೊಳ್ಳುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ವಿವರ ಅನುಬಂಧದಲ್ಲಿ ನೀಡಲಾಗಿದೆ.

ಆ) ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಅಂಗಡಿಗಳನ್ನು ಕಟ್ಟಿದ ವ್ಯಾಪಾರಸ್ಥರು ತಕ್ಷಣ ಅಲ್ಲಿಗೆ ವಹಿವಾಟನ್ನು ಸ್ಥಳಾಂತರಿಸಬೇಕು ಮತ್ತು ಕಟ್ಟಡಗಳನ್ನು ಅಪೂರ್ಣವಾಗಿ ನಿರ್ಮಿಸಿದವರು 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಇ) ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಒದಗಿಸಲಾಗಿದೆ. ಮುಂದುವರೆದ ಸೌಕರ್ಯಗಳ ನಿರ್ವಹಣೆ ಮತ್ತು ಅಭಿವೃದ್ಧಿ ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಅನುಬಂಧ

ಬಂಡೀಪಾಳ್ಯ ಪ್ರಾಂಗಣದಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ

ಹರಾಜುಕಟ್ಟೆಗಳು - 8 ಸಂಖ್ಯೆ

ತೆರೆದ ಹರಾಜುಕಟ್ಟೆಗಳು - 2 ಸಂಖ್ಯೆ

ಗೋದಾಮುಗಳು - 58 ಬಿ ಬ್ಲಾಕಿನಲ್ಲಿ

20 ಸಂಖ್ಯೆ ಈರುಳ್ಳಿ, ಆಲೂಗಡ್ಡೆ ಗೋದಾಮುಗಳ ನಿರ್ಮಾಣ ಎ ಬ್ಲಾಕಿನಲ್ಲಿ

8 ಸಂಖ್ಯೆ ಅಂಗಡಿ ಮಳಿಗೆ

ಕ್ಯಾಂಟೀನ್ ಕಟ್ಟಡ ಮತ್ತು 3 ಸಂಖ್ಯೆ ಟೀ ಸ್ಟಾಲುಗಳು

ನೀರು ಸರಬರಾಜು ಹಾಗೂ ಶೌಚಾಲಯ - 4 ಸಂಖ್ಯೆ

ತನಿಖಾ ಠಾಣೆ - 2 ಸಂಖ್ಯೆ (ಎ ಮತ್ತು ಬಿ ಬ್ಲಾಕಿನಲ್ಲಿ)

ಪೋಲೀಸ್ ಔಟ್ ಪೋಸ್ಟ್ - 1 ಸಂಖ್ಯೆ

ಕಾಂಪೌಂಡ್ ಗೋಡೆ

ರೈತರ ವಿಶ್ರಾಂತಿ ಗೃಹ - 1 ಸಂಖ್ಯೆ

ವಿದ್ಯುನ್ಮಾನ ತಲಾಕದ ಸೇತುವೆ - 1 ಸಂಖ್ಯೆ

ಮಾರುಕಟ್ಟೆ ಪ್ರಾಂಗಣದ ವಿದ್ಯುದೀಕರಣ ಹಾಗೂ ಜನರೇಟರ್

ಶ್ರಮಿಕ ಭವನ - 1 ಸಂಖ್ಯೆ

ಹಮಾಲರ ವಸತಿ ಗೃಹ - 120 ಸಂಖ್ಯೆ

ಪ್ರಾಂಗಣದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ

ಆಡಳಿತ ಕಚೇರಿ ಕಟ್ಟಡ

ಪ್ರಾಂಗಣದಲ್ಲಿ ರಸ್ತೆಗಳ ನಿರ್ಮಾಣ

ಕಲ್ವರ್ಟ್‌ಗಳ ನಿರ್ಮಾಣ

ನೌಕರರ ವಸತಿ ಗೃಹ - 16 ಸಂಖ್ಯೆ

ಮೈಸೂರು ನಗರದಲ್ಲಿ ಬಡವರು - ಕಡುಬಡವರನ್ನು ಗುರುತಿಸುವ ಪ್ರಕಾರ್ಯ

156(249) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಬಡವರು ಮತ್ತು ಕಡು ಬಡವರನ್ನು ಗುರುತಿಸುವ ಕಾರ್ಯ ಯಾವ ಹಂತದಲ್ಲಿದೆ;

ಆ) ಈ ಕಾರ್ಯ ಪೂರ್ಣಗೊಂಡು ಕೇಂದ್ರದ ಯೋಜನೆಯಾದ ಅನ್ನಪೂರ್ಣ, ಅಂತ್ಯೋದಯ ಯೋಜನೆ ಯಾವಾಗ ಜಾರಿಗೊಳಿಸಲಾಗುವುದು;

ಇ) ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? ವಿವರ ನೀಡುವುದು.